KARN020006502018

Presented on : 29-06-2018
Registered on : 29-06-2018
Decided on : 08-06-2025
Duration : 06 years, 11 months, 09 days

**1** ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ**.,**
ರಾಮನಗರ**.**

**:ಉಪಸ್ಥಿತರು :**

**ಶ್ರೀಮತಿ.ನಿವೇದಿತ .ಟಿ.ಎಂ., ಬಿಎ.ಎಲ್., ಎಲ್‌ಎಲ್.ಬಿ.,**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ರಾಮನಗರ.**

ಅಸಲು ದಾವೆ ಸಂಖ್ಯೆ: **158/2018**

ದಿನಾಂಕ**:08** ನೇ ಜೂನ್ **2026**

ವಾದಿ **:**

ಶ್ರೀಮತಿ.ರುದ್ರಮ್ಮ,
ಕೋಂ ಬಿ.ಶಿವಗಂಗಯ್ಯ,
ವಯಸ್ಸು ಸುಮಾರು 65 ವರ್ಷಗಳು,
ವಾಸ: ಅತ್ತಿಂಗೆರೆ ಗ್ರಾಮ,
ಮಾಡಬಾಳ್ ಹೋಬಳಿ,
ಮಾಗಡಿ ತಾಲ್ಲೂಕು ಮತ್ತು ರಾಮನಗರ ಜಿಲ್ಲೆ.

**(**ಪ್ರತಿನಿಧಿಸುವವರು: ಶ್ರೀ**.**ಎಸ್**.**ಎಸ್**.**ಎನ್**.,** ವಕೀಲರು**)**

**-**ವಿರುದ್ಧ**-**

KARN020006502018

ಅಸಲು ದಾವೆ:158/2018

ಪ್ರತಿವಾದಿ : ಶ್ರೀ. ಆರ್.ಗಂಗಯ್ಯ,
ಬಿನ್ ಶ್ರೀ ಲೇಟ್ ರೇವಣ್ಣ.
ವಯಸ್ಸು ಸುಮಾರು 65 ವರ್ಷಗಳು,
ವಾಸ: ಅತ್ತಿಂಗೆರೆ ಗ್ರಾಮ,
ಮಾಡಬಾಳ್ ಹೋಬಳಿ,
ಮಾಗಡಿ ತಾಲ್ಲೂಕು ಮತ್ತು ರಾಮನಗರ ಜಿಲ್ಲೆ.

**(ಪ್ರತಿನಿಧಿಸುವವರು: ಶ್ರೀ.ಕೆ.ಎಲ್.ಎಸ್., ವಕೀಲರು)**

* * * * *

## **:ತೀರ್ಪು:**

ಪ್ರಸ್ತುತ ದಾವೆಯನ್ನು ವಾದಿಯು ಪ್ರತಿವಾದಿಯ ವಿರುದ್ಧ ದಾವಾ 'ಎ' ಷೆಡ್ಯೂಲ್ ಸ್ವತ್ತಿಗೆ ವಾದಿಯು ಮಾಲೀಕರೆಂದು ಘೋಷಿಸಬೇಕೆಂದು ಹಾಗೂ ದಾವಾ 'ಬಿ' ಷೆಡ್ಯೂಲ್ ಸ್ವತ್ತಿನ ಸ್ವಾಧೀನವನ್ನು ಪ್ರತಿವಾದಿಯಿಂದ ಕೊಡಿಸಿಕೊಡಬೇಕೆಂದು ಮತ್ತು ದಾವಾ ಸ್ವತ್ತುಗಳ ವಾದಿಯ ಸ್ವಾಧೀನಾನುಭಕ್ಕೆ ಪ್ರತಿವಾದಿಯು ಯಾವುದೇ ರೀತಿಯ ದಕ್ಕೆಯನ್ನುಂಟು ಮಾಡದಂತೆ ಶಾಶ್ವತ ನಿರ್ಬಂಧಕಾಜ್ಞೆ ನೀಡಬೇಕೆಂದು ಮತ್ತು ಇನ್ನೂ ಇತರ ಸಾಂಧರ್ಭಿಕ ಖರ್ಚುಗಳನ್ನು ನೀಡುವಂತೆ ದಾವೆಯನ್ನು ಹೂಡಿರುತ್ತಾರೆ.

2. <u>ವಾದಿಯ ವಾದ ಪತ್ರದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ:</u>

ವಾದಿ ಮತ್ತು ಪ್ರತಿವಾದಿ ದೂರದ ಸಂಬಂಧಿಕರಾಗಿದ್ದು, ದಾವಾ ಸ್ವತ್ತುಗಳು ರಾಮನಗರಂ ಜಿಲ್ಲೆ ಮತ್ತು ತಾಲ್ಲೂಕು, ಕೂಟಗಲ್ ಹೋಬಳಿ, ದೊಡ್ಡಸೂಲಿಕೆರೆ ಗ್ರಾಮದ ಸರ್ವೆ ನಂಬರ್:207 ರಲ್ಲಿನ ವಿಸ್ತೀರ್ಣ 03 ಗುಂಟೆ ಒಳಗೊಂಡಂತೆ 03 ಎಕರೆ 17 ಗುಂಟೆ

ಸ್ವತ್ತು ' ಎ' ಷಡ್ಯೂಲ್ ದಾವಾ ಸ್ವತ್ತಾಗಿದ್ದು, ಸದರಿ ಸ್ವತ್ತಿಗೆ ವಾದಿಯು ಮಾಲೀಕನಾಗಿರುತ್ತಾರೆ. ವಾದಿ ಮುಂದುವರೆದು ವಾದಿಯು ಹೇಳುವುದೇನೆಂದರೆ ಸಲ್ಲಿಸಿಕೊಳ್ಳುವುದೇನೆಂದರೆ ರಾಮನಗರಂ ಜಿಲ್ಲೆ ಮತ್ತು ತಾಲ್ಲೂಕ್ಕು, ಕೂಟಗಲ್ ಹೋಬಳಿ, ದೊಡ್ಡಸೂಲಿಕೆರೆ ಗ್ರಾಮದ ಸರ್ವೆ ನಂ 207ರಲ್ಲಿನ ವಿಸ್ತೀರ್ಣ 04 ಗುಂಟೆ ಸ್ವತ್ತು 'ಬಿ' ಷಡ್ಯೂಲ್ ದಾವಾ ಸ್ವತ್ತಾಗಿದ್ದು, ಸದರಿ ಸ್ವತ್ತು 'ಬಿ' ಷಡ್ಯೂಲ್ ಸ್ವತ್ತನೇ ಪ್ರತಿವಾದಿಯು ಒತ್ತುವರಿ ಮಾಡಿರುವ ಸ್ವತ್ತಾಗಿರುತ್ತದೆ.

3. ವಾದಿ ಮುಂದುವರೆದು ಹೇಳುವುದೇನೆಂದರೆ, ದಾವಾ ಸ್ವತ್ತುಗಳು ವಾದಿಗೆ ಸ್ವಯಾರ್ಜಿತ ಸ್ವತ್ತಾಗಿದ್ದು, ದಾವಾ ಸ್ವತ್ತುಗಳನ್ನು ವಾದಿಯು ದಿನಾಂಕ:17.04.1980 ರಂದು ಜಿ.ಹೆಚ್.ಹನುಮಂತಯ್ಯ @ ಪಾಪಣ್ಣ ಬಿನ್. ಹನುಮಂತಯ್ಯ @ ಜೂಂಜಯ್ಯರವರಿಂದ ಶುದ್ಧ ನೊಂದಾಯಿತ ಕ್ರಯಪತ್ರದ ಮೂಲಕ ಕ್ರಯಕ್ಕೆ ಪಡೆದುಕೊಂಡಂತಹ ಸ್ವತ್ತಾಗಿದ್ದು, ವಾದಿಯು ದಾವಾ ಸ್ವತ್ತುಗಳನ್ನು ಕ್ರಯಕ್ಕೆ ಪಡೆದುಕೊಂಡ ನಂತರ ದಾವಾ ಸ್ವತ್ತುಗಳಿಗೆ ವಾದಿಯು ಮಾಲೀಕರಾಗಿದ್ದು, ಸರ್ಕಾರಕ್ಕೆ ಕಟ್ಟಬೇಕಾದ ಕಂದಾಯ-ವಗೈರೆಗಳನ್ನು ಕಟ್ಟಿಕೊಂಡು ದಾವಾ ಸ್ವತ್ತುಗಳ ಕಂದಾಯ ದಾಖಲಾತಿಗಳನ್ನು ತಮ್ಮ ಹೆಸರಿಗೆ ಮಾಡಿಸಿಕೊಂಡು ದಾವಾ 'ಬಿ' ಷಡ್ಯೂಲ್ ಸ್ವತ್ತನ್ನು ಹೊರತ್ತುಪಡಿಸಿ ಇನ್ನೂಳಿಕೆ ಸ್ವತ್ತಿನಲ್ಲಿ ವಾದಿಯು ಸಂಪೂರ್ಣ

ಸ್ವಾಧೀನಾನುಭವದಲ್ಲಿತ್ತಾರೆ. ಪ್ರತಿವಾದಿಯು 'ಎ' ಷೆಡ್ಯೂಲ್ ಸ್ವತ್ತಿನ ಪಶ್ಚಿಮ ಭಾಗಕ್ಕೆ ಇದ್ದು, ಸದರಿ ಪ್ರತಿವಾದಿಯು 'ಎ' ಷೆಡ್ಯೂಲ್ ಸ್ವತ್ತಿನ ಪೈಕಿ 'ಬಿ' ಷೆಡ್ಯೂಲ್ ಸ್ವತ್ತನ್ನು ಒತ್ತುವರಿಯನ್ನು ಮಾಡಿಕೊಂಡಿರುತ್ತಾರೆ. ಸದರಿ ವಿಷಯವು ಈಗ್ಗೆ ವಾದಿಗೆ 'ಬಿ' ಷೆಡ್ಯೂಲ್ ಸ್ವತ್ತಿನ ಹದ್ದುಬಸ್ತನ್ನು ಮಾಡಿಕೊಂಡುವಂತೆ ಸಂಬಂಧಪಟ್ಟ ತಹಶೀಲ್ದಾರವರಿಗೆ ಸರ್ವೆಗಾಗಿ ಅರ್ಜಿಯನ್ನು ಸಲ್ಲಿಸಿದ್ದು ನಂತರ ಸದರಿ ತಹಶೀಲ್ದಾರವರ ಕಛೇರಿಯವರು 'ಎ' ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಹದುಬಸ್ತನ್ನು ಮಾಡಲು ಸರ್ವೆ ಅಧಿಕಾರಿಗಳು ಅಳತೆಯನ್ನು ಮಾಡಿದ ಸಂದರ್ಭದಲ್ಲಿ ಪ್ರತಿವಾದಿಯು 'ಎ' ಷೆಡ್ಯೂಲ್ ಸ್ವತ್ತಿನ ಪಶ್ಚಿಮ ಭಾಗದ ಕಡೆಯಿಂದ 'ಬಿ' ಷೆಡ್ಯೂಲ್ ಸ್ವತ್ತನ್ನು ಒತ್ತುವರಿ ಮಾಡಿರುವ ವಿಷಯ ವಾದಿಗೆ ತಿಳಿದು ಬಂದಿರುತ್ತದೆ. ಮುಂದುವರೆದು, ದಾವಾ ಸ್ವತ್ತುಗಳನ್ನು ವಾದಿಯು ದಿನಾಂಕ:17.04.1980 ರಂದು ಶುದ್ಧ ನೊಂದಾಯಿತ ಕ್ರಯಪತ್ರದ ಮೂಲಕ ಕ್ರಯಕ್ಕೆ ಪಡೆದುಕೊಂಡಂತಹ ಸ್ವತ್ತಾಗಿದ್ದು, ಆದರೆ ಕ್ರಯಪತ್ರದಲ್ಲಿನ ಷೆಡ್ಯೂಲ್‌ನಲ್ಲಿ ವಿಸ್ತೀರ್ಣವನ್ನು 3 ಎಕರೆ 14 ಗುಂಟೆ ಎಂದು ನಮೂದು ಮಾಡುವ ಬದಲು 3 ಎಕರೆ 4 ಗುಂಟೆ ಎಂದು ಕೈ ತಪ್ಪಿನಿಂದ ನಮೂದು ಮಾಡಲಾಗಿದ್ದು, ಆದರೆ ದಾವಾ ಸ್ವತ್ತಿನ ಚೆಕ್ಕುಬಂಧಿ ಮತ್ತು ಕ್ರಯಪತ್ರದ ಚೆಕ್ಕುಬಂಧಿ ಒಂದೆಯಾಗಿರುತ್ತದೆ. ಮುಂದುವರೆದು, ಕ್ರಯಪತ್ರದಲ್ಲಿ ನಮೂದಿಸಿರುವ ವಿಸ್ತೀರ್ಣವು 03 ಗುಂಟೆ ಖರಾಬ್ ಒಳಗೊಂಡಂತೆ 3 ಎಕರೆ 17 ಗುಂಟೆಯಾಗಿದ್ದು, ಅದರಂತೆ ದಾವಾ ಸ್ವತ್ತಿನ ಕಂದಾಯ ದಾಖಲಾತಿಗಳು ವಾದಿಯ

ಹೆಸರಿಗೆ ನಮೂದಾಗಿರುವ ಕಾರಣ ವಾದಿಯು ದಾವಾ ಸ್ವತ್ತಿಗೆ ಸಂಪೂರ್ಣ ಮಾಲೀಕರಾಗಿರುತ್ತಾರೆ.

4. ವಾದಿ ಮುಂದುವರೆದು ಹೇಳುವುದೇನೆಂದರೆ ಪ್ರತಿವಾದಿಯು ದಾವಾ 'ಬಿ' ಷೆಡ್ಯೂಲ್ ಸ್ವತ್ತನ್ನು ಒತ್ತುವರಿಯನ್ನು ಮಾಡಿರುವ ವಿಚಾರ ತಿಳಿದ ಕೂಡಲೇ ವಾದಿಯು ಪ್ರತಿವಾದಿಯನ್ನು 'ಬಿ' ಷೆಡ್ಯೂಲ್ ಸ್ವತ್ತು ವಾದಿಗೆ ಸೇರಬೇಕಾಗಿರುವ ಸ್ವತ್ತಗಿರುವುದರಿಂದ ಸದರಿ ಸ್ವತ್ತನ್ನು ಬಿಟ್ಟುಕೊಡುವಂತೆ ವೈಯಕ್ತಿಕವಾಗಿ ಭೇಟಿಯನ್ನು ಮಾಡಿ ಕೇಳಿದರೂ ಯಾವುದೇ ಪ್ರಯೋಜನವಾಗಿರುವುದಿಲ್ಲ. ವಾದಿಯು ವಿಚಾರವಾಗಿ ತಮ್ಮ ಗ್ರಾಮದಲ್ಲಿ ಪಂಚಾಯ್ತಿದಾರರನ್ನು ಸೇರಿಸಿ ಪ್ರತಿವಾದಿಯು ಒತ್ತುವರಿಯನ್ನು ಮಾಡಿರುವ ಬಗ್ಗೆ ಕೇಳಲಾಗಿ ಪ್ರತಿವಾದಿಯು ಪಂಚಾಯ್ತಿದಾರರ ತಿರ್ಮಾನಕ್ಕೆ ಯಾವುದೇ ಮನ್ನಣೆ ನೀಡಿರುವುದಿಲ್ಲ. ಕಾರಣ ವಾದಿಯು ಪ್ರಸ್ತುತ ದಾವೆಯನ್ನು ಹೂಡಿ ಘೋಷಣೆ, ಸ್ವಾಧೀನತೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆ ಮತ್ತು ಇತರ ಪರಿಹರವನ್ನು ಕೊಡಿಸಬೇಕೆಂದು ಕೇಳಿಕೊಂಡಿರುತ್ತಾರೆ.

5. ಪ್ರತಿವಾದಿಗಳಿಗೆ ನ್ಯಾಯಾಲಯದ ಮುಖಾಲಕ ಸಮನ್ಸನ್ನು ಜಾರಿ ಮಾಡಿದ್ದು, ಸದರಿ ಪ್ರತಿವಾದಿಗಳು ಅವರುಗಳ ವಕೀಲರ ಮುಖಾಂತರ ನ್ಯಾಯಾಲಕ್ಕೆ ಹಾಜರಾಗಿದ್ದು, ಆದರೆ ಲಿಖಿತ ಹೇಳಿಕೆಗಳನ್ನು ಸಲ್ಲಿಸಿರುವುದಿಲ್ಲ.

6. ವಾದಿಯು ತನ್ನ ವಾದವನ್ನು ಸಾಬೀತುಪಡಿಸಲು ತನ್ನನ್ನು ಪಿಡಬ್ಲ್ಯು-1 ಎಂದು ವಿಚಾರಣೆಗೆ ಒಳಪಡಿಸಿಕೊಂಡಿದ್ದು, ಇವರ ಪರವಾಗಿ ಒಬ್ಬರು ಸಾಕ್ಷಿದಾರನ್ನು ಪಿಡಬ್ಲ್ಯು-2 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, 21 ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-1 ರಿಂದ ನಿಪಿ-21 ಎಂದು ಗುರುತಿಸಿಕೊಂಡಿರುತ್ತಾರೆ.

7. ವಾದಿಯ ಪರ ವಕೀಲರ ಸಲ್ಲಿಸಿದ ವಾದವನ್ನು ಆಲಿಸಲಾಯಿತು ಮತ್ತು ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು.

8. ಈ ಕೆಳಗಿನ ಅಂಶಗಳು ನನ್ನ ಪರ್ಯಾಲೋಚನೆಗೆ ಉದ್ಭವಿಸುತ್ತವೆ:

*1.* ವಾದಿಯು ವಾದ ಪತ್ರದಲ್ಲಿ ಕೇಳಿದ ಪರಿಹಾರವನ್ನು ಪಡೆಯಲು ಅರ್ಹರೇ?

*2.* ಯಾವ ಆದೇಶ ಅಥವಾ ಡಿಕ್ರಿ?

9. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ:

ಅಂಶ ಸಂಖ್ಯೆ.**1** : ಸಕಾರಾತ್ಮಕವಾಗಿ:

ಅಂಶ ಸಂಖ್ಯೆ.**2** : ಅಂತಿಮ ಆದೇಶದಂತೆ ಈ ಕೆಳಗಿನ ಕಾರಣಗಳಿಗಾಗಿ:

# :ಕಾರಣಗಳು:

10. <u>ಅಂಶ ಸಂಖ್ಯೆ.**1:-**</u> ವಾದಿಯು ಪ್ರತಿವಾದಿಯ ವಿರುದ್ಧ ಪ್ರಸ್ತುತ ದಾವೆಯನ್ನು ಹೂಡಿ ಘೋಷಣೆ, ಸ್ವಾಧೀನತೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆ ಮತ್ತು ಇತರ ಪರಿಹರವನ್ನು ಕೊಡಿಸಬೇಕೆಂದು ಕೇಳಿಕೊಂಡಿರುತ್ತಾರೆ.

ವಾದಿಯು ತನ್ನ ಪ್ರಕರಣವನ್ನು ಸಾಬೀತುಪಡಿಸಲು ತನ್ನನ್ನು ಪಿಡಬ್ಲ್ಯೂ-1 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ತನ್ನ ಮುಖ್ಯವಿಚಾರಣೆಯಲ್ಲಿ ವಾದ ಪತ್ರದಲ್ಲಿನ ಸಂಗತಿಗಳನ್ನು ಪುನರುಚ್ಚರಿಸಿದ್ದು, ತನ್ನ ಪರವಾಗಿ 21 ದಾಖಲೆಗಳನ್ನು ಹಾಜರುಪಡಿಸಿದ್ದು, ನಿಪಿ-1 ರಿಂದ 15 ಪಹಣಿ ಪತ್ರಿಕೆಗಳು, ನಿಪಿ-16 ತಹಶೀಲ್ದಾರರಿಗೆ ನೀಡಿರುವ ಮನವಿ ಪತ್ರ, ನಿಪಿ-17 ದೃಢಿಕೃತ ಹದ್ದು ಬಸ್ತು ನಕ್ಷೆ, ನಿಪಿ-18 ಸ್ವೀಕೃತಿ, ನಿಪಿ-19 ಸೆಟಲ್ ಮೆಂಟ್ ಆಕಾರ್ ಬಂದ್ ಮತ್ತು ನಿಪಿ-20 ದೃಢಿಕೃತ ಗ್ರಾಮದ ನಕ್ಷೆ ಮತ್ತು ಕ್ರಯಪತ್ರ ಇರುತ್ತವೆ.

11. ವಾದಿಯು ಹಾಜರುಪಡಿಸಿದ ಮೌಖಿಕ ಮತ್ತು ದಾಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಿದಾಗ, ವಾದಿಯು ತನ್ನ ಮುಖ್ಯವಿಚಾರಣೆಯಲ್ಲಿ ದಾವಾ ಸ್ವತ್ತು ವಾದಿಯ ಸ್ವಯಾರ್ಜಿತ ಸ್ವತ್ತಾಗಿರುವುದಾಗಿ ಹೇಳಿದ್ದು, ಆ ಕುರಿತು ವಾದಿಯು ಹಾಜರುಪಡಿಸಿದ ನಿಪಿ-

21ನ್ನು ಪರಿಶೀಲಿಸಿ ನೋಡಲಾಗಿ ಅದು ಶುದ್ಧ ಕ್ರಯಪತ್ರವಿದ್ದು, ವಾದಿಯಾದ ಶ್ರೀಮತಿ.ರುದ್ರಮ್ಮರವರು ಲೇಟ್ ಹನುಮಂತಯ್ಯ ಉ: ಜೂಂಜಯ್ಯರವರ ಮಗನಾದ ಜಿ.ಹೆಚ್.ಹಮಯಿಂತಯಯ್ಯ ಉ:ರಾಮಣ್ಣರವರಿಂದ ದಿನಾಂಕ:17.04.1980ರಲ್ಲಿ 3 ಎಕರೆ 4 ಗುಂಟೆ ಜಮೀನನ್ನು ಖರೀದಿಸಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಮುಂದುವರೆದು ಈ ದಾವೆಗೆ ಸಂಬಂದಪಟ್ಟಂತೆ ಅಂದರೆ ದಾವಾ ಷೆಡ್ಯೂಲ್ 'ಎ' ಸ್ವತ್ತಿಗೆ ಸಂಬಂದಿಸಿದಂತೆ ನಿಪಿ-1 ರಿಂದ ನಿಪಿ-14 ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ಸದರಿ ದಾಖಲಾತಿಗಳನ್ನು ಪರಿಶೀಲಿಸಿ ನೋಡಲಾಗಿ ಪಹಣಿ ಪತ್ರಿಕೆಗಳಲ್ಲಿ ರದ್ರಮ್ಮ ಕೋಂ ಶಿವಗಂಗಯ್ಯನವರ ಹೆಸರಿನಲ್ಲಿ 3 ಎಕರೆ 14 ಗುಂಟೆ ಸ್ವತ್ತು ಇದ್ದು, ಸದರಿ ಪಹಣಿ ಪತ್ರಿಕೆಗಳು 2004 ರಿಂದ 2018ರವರೆವಿಗೆ ಇರುವುದು ಕಂಡುಬಂದಿರುತ್ತದೆ. ಮುಂದುವರೆದು, ನಿಪಿ-16 ಶ್ರೀಮತಿ.ರುದ್ರಮ್ಮರವರು ತಹತೀಲ್ದಾರ್ ರವರಿಗೆ ಒತ್ತುವರಿಯನ್ನು ಬಿಡಿಸಿಕೊಡುವಂತೆ ನೀಡಿದ ಮನವಿ/ದೂರು ಇರುತ್ತದೆ. ನಿಪಿ-14 ದೃಢಿಕೃತ ನಕ್ಷೆ ಇದ್ದು, ನಿಪಿ-18 ಪೊಲೀಸರಿಗೆ ನೀಡಿದ ದೂರಿನ ಸ್ವೀಕೃತಿ ಇರುತ್ತದೆ. ಮುಂದುವರೆದು ನಿಪಿ-19 ಕರ್ನಾಟಕ ರಿವಿಜನ್ ಸೆಟಲ್‌ಮೆಂಟ್ ಆಕಾರ್ ಬಂದ್ ಇದ್ದು, ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ 3 ಎಕರೆ 14 ಗುಂಟೆ ಜೊತೆ 3 ಗುಂಟೆ ಖಾರಬ್ ಸ್ವತ್ತು ಇದ್ದು, ಒಟ್ಟು 3 ಎಕರೆ 17 ಗುಂಟೆ ಸ್ವತ್ತು ಇರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಮುಂದುವರೆದು ಮತ್ತು ನಿಪಿ-20 ವಿಲೇಜ್ ಮ್ಯಾಪ್ ಇರುತ್ತದೆ.

12. ಮುಂದುವರೆದು, ನ್ಯಾಯಾಲಯದಿಂದ ಪ್ರತಿವಾದಿಗೆ ಸಮನ್ಸ್ ಜಾರಿಯಾಗಿದ್ದು, ಪ್ರತಿವಾದಿರವರು ಅವರ ವಕೀಲರ ಮುಖಾಂತರ ಹಾಜರಾಗಿದ್ದು, ಸದರಿಯವರು ಯಾವುದೇ ತಕಾರರನ್ನು ಸಲ್ಲಿಸಿರುವುದಿಲ್ಲ. ಮುಂದುವರೆದು, ವಾದಿಯ ತಮ್ಮ ಪರವಾದ ರುಜುವಾತುಪಡಿಸಿಸಲು ಒಬ್ಬರು ಸಾಕ್ಷಿದರರನ್ನು ಪಿಡಬ್ಲ್ಯೂ-2 ವಿಚಾರಣೆಗೊಳಪಡಿಸಿದ್ದು, ಇವರು ಸಹ ಪಿಡಬ್ಲ್ಯೂ-1ರವರ ಸಾಕ್ಷ್ಯವನ್ನೇ ಪುನರುಚ್ಚರಿಸಿದ್ದು, ಸದರಿ ಸಾಕ್ಷಿಯ ತಮ್ಮ ಮುಖ್ಯವಿಚಾರಣೆಯಲ್ಲಿ ಸದರಿ 4 ಗುಂಟೆ ಸ್ವತ್ತನ್ನು ಅದರ ಪಕ್ಕದ ಜಮೀನಿನ ಅತ್ತಿಮಗೆರೆ ಗ್ರಾಮಕ್ಕೆ ಸೇರಿದ ಮಾಲೀಕರು ಒತ್ತು ವರಿ ಮಾಡಿದ್ದು, ಸರ್ವೆ ಮಾಡಲು ಸದರಿ ಸಾಕ್ಷಿಗೂ ಸಹ ಆಜುಬಾಜುದಾರಾಗಿ ನೋಟಿಸು ನೀಡಿದ್ದು, ನಿಪಿ-17ರಲ್ಲಿ ನೀಡಿರುವ ವರದಿಯು ಸತ್ಯವಾಗಿರುತ್ತದೆಂದು ನುಡಿದಿರುತ್ತಾರೆ.

13. ಮೇಲ್ಕಂಡ ಸವಿಸ್ತಾರವಾದ ಚರ್ಚೆಯನುಸಾರ, ಮುಖ್ಯವಾಗಿ ಇಲ್ಲಿ ಗಮನಿಸಬೇಕಾದ ಎರಡು ಅಂಶಗಳೆನೆಂದರೆ ಮೊದಲನೆಯದಾಗಿ ವಾದಿಯು ನ್ಯಾಯಾಲಯದ ಮುಂದೆ ಪ್ರತಿವಾದಿಯ ವಿರುದ್ಧ ಘೋಷಣೆ, ಶಾಶ್ವತ ನಿರ್ಬಂದಾಜ್ಞೆಯನ್ನು ಕೋರಿ ಈ ದಾವೆಯನ್ನು ಹೂಡಿದ್ದು, ಸದರಿ ಪಿಡಬ್ಲ್ಯೂ-1ರವರು ಹಾಜರು ಮಾಡಿದ ನಿಪಿ-1 ರಿಂದ 15, 17, 19 ರಿಂದ ನಿಪಿ-21ನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಸದರಿ ದಾವಾ ಸ್ವತ್ತನ್ನು ವಾದಿಯು ಲೇಟ್ ಹನುಮಂತಯ್ಯ ಉಃ ಜೂಂಜಯ್ಯರವರ ಮಗನಾದ ಜಿ.ಹೆಚ್.ಹನುಮಂತಯ್ಯ

ಊ:ರಾಮಣ್ಣರವರಿಂದ ದಿನಾಂಕ:17.04.1980 ಖರೀದಿಸಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ. ತದನಂತರ ಸದರಿ ವಾದಿಯು ಸ್ವಾಧೀನಾನುಭವನ್ನು ಹೊಂದಿರುವುದು ಸದರಿ ಕಂದಾಯ ದಾಖಲಾತಿಗಳಿಂದ ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಪಿಡಬ್ಲ್ಯೂ-1ರವರು ಹಾಜರುಪಡಿಸಿದ ನಿಪಿ-17ರಲ್ಲಿ ಸದರಿ 'ಬಿ' ಷೆಡ್ಯೂಲ್ ಸ್ವತ್ತಿನಲ್ಲಿ 4 ಗುಂಟೆ ಜಮೀನನ್ನು ಅದರ ಬಾಜುದಾರರು ಒತ್ತುವರಿ ಮಾಡಿರುವುದಾಗಿ ನಮೂದು ಮಾಡಿದ್ದು, ಸದರಿ ಹದ್ದುಬಸ್ತು ನಕ್ಷೆಯಲ್ಲಿ ಸಹ ತೋರಿಸಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ.

14. ಎರಡನೆಯದಾಗಿ ಇಲ್ಲಿ ಮುಖ್ಯವಾಗಿ ಪ್ರತಿವಾದಿಯು ತಮ್ಮ ವಕೀಲರ ಮುಖಾಂತರ ನ್ಯಾಯಾಲಯದ ಮುಂದೆ ಹಾಜರಾಗಿದ್ದು, ತಮ್ಮ ಪ್ರತಿವಾದನ್ನು ಮಂಡಿಸಿರುವುದಿಲ್ಲ ಮತ್ತು ವಾದಿಯು ಹೇಳುವಂತೆ ಸದರಿ ದಾವಾ ಸ್ವತ್ತುಗಳಲ್ಲಿ ಯಾವುದೇ ರೀತಿಯ ಒತ್ತುವರಿಯಾಗಿರುವುದಿಲ್ಲವೆಂದು ಎನ್ನುವ ಅಂಶವನ್ನು ನ್ಯಾಯಾಲಯದ ಮುಂದೆ ಹಾಜರಾಗಿ ವಿಚಾರಣೆಯ ಮೂಲಕ ಮತ್ತು ಸದರಿ ವಾದಿಯು ಹಾಜರುಪಡಿಸಿರುವ ದಾಖಲೆಗಳು ಕೋಟಾ ಎಂದು ರುಜುವಾತುಪಡಿಸುವ ಭಾರವು ಪ್ರತಿವಾದಿಗಳಾದಾಗಿರುತ್ತದೆ. ಆದರೆ ಈ ದಾವೆಯಲ್ಲಿ ಸದರಿ ಪ್ರತಿವಾದಿಗಳು ತಮ್ಮ ವಕೀಲರ ಮೂಲಕ ಹಾಜರಾಗಿರುವುದನ್ನು ಹೊರತುಪಡಿಸಿ ಲಿಖಿತ ಹೇಳಿಕೆಯನ್ನು ಸಲ್ಲಿಸಿ ತಮ್ಮ ಪ್ರತಿವಾದವನ್ನು ಮಂಡಿಸಿರುವುದಿಲ್ಲ. ಇದು ಪ್ರತಿವಾದಿಳಿಗೆ ಪ್ರತಿಕೂಲವಾಗಿರುತ್ತದೆ.

15. ಈ ಮೇಲ್ಕಂಡ ಸವಿಸ್ತಾರವಾದ ಚರ್ಚೆಯಾನುಸಾರ, ವಾದಿಯು ಸದರಿ ದಾವಾ ಸ್ವತ್ತನ್ನು ನಿಪಿ-1ನ್ನು ವಾದಿಯ ತಂದೆ ಖರೀದಿ ಮಾಡಿರುವುದನ್ನು ರುಜುವಾತುಪಡಿಸಿದ್ದು, ಸದರಿ ಅಂಶವನ್ನು ರುಜುವಾತು ಪಡಿಸಲು ಪಿಡಬ್ಲ್ಯೂ-1 ಎಂದು ಮತ್ತು ಇವರ ಪರವಾಗಿ ಒಬ್ಬರು ಸಾಕ್ಷಿದರರನ್ನು ಪಿಡಬ್ಲ್ಯೂ-2 ವಿಚಾರಣೆ ಮಾಡಿಸಿದ್ದು ಮತ್ತು ನ್ಯಾಯಾಲದ ಮುಂದೆ ಪೂರಕವಾದ ದಾಖಲೆಗಳನ್ನು ಹಾಜರುಪಡಿಸಿದ ಕಾರಣ ವಾದಿ ದಾವಾ ಸ್ವತ್ತಿ ಮಾಲೀಕರೆಂದು, ಮತ್ತು ನಿಪಿ-17ರ ಪ್ರಕಾರ ಸದರಿ ಸ್ವತ್ತಿನಲ್ಲಿ ಬಾಜುದಾರರು 4 ಗುಂಟೆ 'ಬಿ' ಷೆಡ್ಯೂಲ್ ಸ್ವತ್ತನ್ನು ಒತ್ತುವರಿ ಮಾಡಿರುವುದನ್ನು ಸ್ಪಷ್ಟವಾಗಿ ಹಾಜರುಪಡಿಸಿದ ಕಾರಣ, ಈ ನ್ಯಾಯಾಲಯವು ನಿರ್ಣಯಕ್ಕೆ ಬಂದ ಕಾರಣ ಅಂಶ ಸಂಖ್ಯೆ**.1**ನ್ನು ಸಕಾರಾತ್ಮಕವೆಂದು ಉತ್ತರಿಸಿರುತ್ತೇನೆ.

15. <u>ಅಂಶ ಸಂಖ್ಯೆ**.2:-**</u> ಅಂಶ ಸಂಖ್ಯೆ.1ನ್ನು ಈ ಮೇಲಿನಂತೆ ಉತ್ತರಿಸಿದ್ದರಿಂದ, ಈ ಕೆಳಗಿನಂತೆ ಅಂತಿಮವಾಗಿ ಆದೇಶಿಸಿರುತ್ತೇನೆ.

## <u>ಆದೇಶ</u>

ವಾದಿಯ ದಾವೆಯನ್ನು ಖರ್ಚಿನೊಂದಿಗೆ ಪುರಸ್ಕರಿಸಲಾಗಿದೆ.

ವಾದಿಯು ಸದರಿ ದಾವಾ 'ಎ' ಮತ್ತು 'ಬಿ' ಷೆಡ್ಯೂಲ್ ಸ್ವತ್ತಿಗೆ ಮಾಲೀಕರೆಂದು ಘೋಷಿಸಿದ್ದು, ಸದರಿ ದಾವಾ ಸ್ವತಿಗೆ

ಪ್ರತಿವಾದಿಗಳಾಗಲೀ ಅವರ ವಾರಸುದಾರರಾಗಲೀ, ಅನುಯಾಯಿಗಳಾಗಲೀ, ಸಹಚರರಿಂದಾಗಲೀ, ಯಾರೇ ಆಗಲೀ ವಾದಿಯ ದಾವಾ ಸ್ವತ್ತಿನ ಶಾಂತಿಯುತ ಸ್ವಾದೀನಾನುಭವಕ್ಕೆ ಧಕ್ಕೆಯುಂಟು ಮಾಡಬಾರದೆಂದು ಶಾಶ್ವತ ನಿರ್ಬಂಧಕಾಜ್ಞೆಯನ್ನು ನೀಡಲಾಗಿದೆ.

ಮುಂದುವರೆದು, ಸದರಿ 'ಎ' ಷೆಡ್ಯೂಲ್ ಸ್ವತಿನಲ್ಲಿ 4 ಗುಂಟೆ ಒತ್ತುವರಿಯಾಗಿರುವ 'ಬಿ' ಷೆಡ್ಯೂಲ್ ಸ್ವತ್ತನ್ನು ಸದರಿ ಪ್ರತಿವಾದಿಯು ವಾದಿಗೆ ಬಿಟ್ಟುಕೊಡುಲು ಈ ಮೂಲಕ ಆದೇಶಿಸಲಾಗಿದೆ.

ಮೇಲಿನ ಆದೇಶದಂತೆ ಡಿಕ್ರಿಯನ್ನು ತಯಾರಿಸಿರಿ.

(ಮೇಲಿನ ಆದೇಶವನ್ನು ಶೀಘ್ರಲಿಪಿಗಾರಿನಿಂದ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ನಂತರ ಓದಿ ತಿದ್ದುಪಡಿ ಮಾಡಿ ಸಹಿ ಮಾಡಿ ಇಂದು ದಿನಾಂಕ:-08-06-2026 ರಂದು ತೆರೆದ ನ್ಯಾಯಾಲಯದಲ್ಲಿ ಪ್ರಸಿದ್ದಿಪಡಿಸಲಾಯಿತು).

**(ಶ್ರೀಮತಿ.ನಿವೇದಿತ.ಟಿ.ಎಂ)**
**1** ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ.,
ರಾಮನಗರ.

# <u>ಅನುಸೂಚಿ</u>

## <u>ವಾದಿಯ ಪರ ಮಾಡಿದ ಸಾಕ್ಷಿದಾರರ ಪಟ್ಟಿ:</u>

ಪಿಡಬ್ಲ್ಯೂ-1 : ಶ್ರೀಮತಿ.ರುದ್ರಮ್ಮ;

KARN020006502018

ಅಸಲು ದಾವೆ:158/2018

ಪಿಡಬ್ಲ್ಯೂ-2 : ಶ್ರೀ.ಎಲ್.ಟಿ.ಪ್ರಭಾಕರ್.

## ವಾದಿಯ ಪರ ಹಾಜರುಪಡಿಸಿದ ದಾಖಲೆಗಳ ಪಟ್ಟಿ:

ನಿಪಿ-1 ರಿಂದ 15 : ಪಹಣಿ ಪತ್ರಿಕೆಗಳು;

ನಿಪಿ-16 : ದೂರಿನ ಪ್ರತಿ;

ನಿಪಿ-17 : ದೃಡಿಸಿಕೃತ ನಕ್ಷೆ;

ನಿಪಿ-18 : ಸ್ವಿಕೃತಿ;

ನಿಪಿ-19 : ಆಕಾರ್ ಬಂದ್;

ನಿಪಿ-20 : ದೃಡಿಸಿಕೃತ ಗ್ರಾಮ ನಕ್ಷೆ;

ನಿಪಿ-21 : ನೋಂದಾಯಿತ ಕ್ರಯದ ಪತ್ರ.

## ಪ್ರತಿವಾದಿಯ ಪರ ಮಾಡಿದ ಸಾಕ್ಷಿದಾರರ ಪಟ್ಟಿ:

-ಇಲ್ಲ-

## ಪ್ರತಿವಾದಿಯ ಪರ ಹಾಜರುಪಡಿಸಿದ ದಾಖಲೆಗಳ ಪಟ್ಟಿ:

-ಇಲ್ಲ-

**1** ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ**.,**
ರಾಮನಗರ**.**